...

298 (540) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ, ಕಲಘಟಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲದೆ ಹೊಸದಾಗಿ ಪ್ರೌಢಶಾಲೆ, ಕಿರಿಯ ಕಾಲೇಜು ಮಂಜೂರಾತಿಗೆ ಸರ್ಕಾರ ಉದ್ದೇಶಿಸಿದೆಯೇ;

ಇ) ಈ ಭಾಗದ ಯಾವ ಯಾವ ಸ್ಥಳದಲ್ಲಿ ಮಂಜೂರು ಮಾಡಲು ಉದ್ದೇಶಿಸಿದೆ. ಹಾಗೂ ಯಾವಾಗ ಮಂಜೂರಾತಿ ನೀಡಲಾಗುತ್ತದೆ;

ಈ) ಅದರಗುಂಚ, ಛಬ್ಬಿ, ಮುತ್ತಿಗೆ, ಇಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ವಿಚಾರ ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸರ್ಕಾರಿ ಪದವಿಪೂರ್ವ ಕಾಲೇಜು – 01 ಸರ್ಕಾರಿ ಪ್ರೌಢಶಾಲೆಗಳು – 05

ಆ) ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

1. ಸರ್ಕಾರಿ ಪದವಿಪೂರ್ವ ಕಾಲೇಜು, ಸಂಗಮೇಶ್ವರ.
2. ಸರ್ಕಾರಿ ಪ್ರೌಢಶಾಲೆ, ದೇವಿಕೊಪ್ಪ;
3. ಸರ್ಕಾರಿ ಪ್ರೌಢಶಾಲೆ, ಕಲಘಟಗಿ
4. ಸರ್ಕಾರಿ ಪ್ರೌಢಶಾಲೆ, ಬೊಮ್ಮಿನಘಟ್ಟಿ
5. ಸರ್ಕಾರಿ ಪ್ರೌಢಶಾಲೆ, ಹಿರೇ ಹೊನ್ನಳ್ಳಿ
6. ಸರ್ಕಾರಿ ಪ್ರೌಢಶಾಲೆ, ಸೂರಶೆಟ್ಟಿಕೊಪ್ಪ, ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಇ) ಈ) ಪರಿಶೀಲಿಸಲಾಗುತ್ತಿದೆ.

...

299 (640) : ಶ್ರೀ ಗಂಗಾಧರ ನಾಗೇಶ್ ಭಟ್ (ಕಾರವಾರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲಾ ಪಂಚಾಯತಿನಲ್ಲಿ ನಡೆದ ಅವ್ಯವಹಾರದ ಕುರಿತು ಸಿ.ಬಿ.ಐ. ತನಿಖಾ ವರದಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ವರದಿ ಸಲ್ಲಿಸಿದ್ದು ಯಾವಾಗ;

ಇ) ವರದಿಯಲ್ಲಿ ಪ್ರಸ್ತಾಪಿತವಾದ ಪ್ರಮುಖ ಅಂಶಗಳಾವುವು;

ಈ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;

ಉ) ತನಿಖಾ ವರದಿಯಧಾರದ ಮೇಲೆ ಸರಕಾರ ಯಾವ ಕ್ರಮಕ್ಕೆಗೊಳ್ಳಲಿದೆ?